KATK030138412021

**9ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು 10ನೇ ಜೆ.ಎಂ.ಎಫ್.ಸಿ ನ್ಯಾಯಾಲಯ, ತುಮಕೂರು**

ದಿನಾಂಕ 24ನೇ ಜುಲೈ, 2026

ಉಪಸ್ಥಿತರುಃ
**ಶ್ರೀಮತಿ ಗಾಯತ್ರಿ ಎನ್.** ಬಿ.ಕಾಂ., ಎಲ್.ಎಲ್.ಬಿ
9ನೇ ಅಧಿಕ ಸಿವಿಲ್ ಮತ್ತು 10ನೇ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ತುಮಕೂರು.

**ಅಪರಾಧಿಕ ಪ್ರಕರಣ ಸಂಖ್ಯೆಃ 12318/2021**

**ಪಿರ್ಯಾದುದಾರರು** : ರಾಜ್ಯ ಸರ್ಕಾರದ ಪರವಾಗಿ -
ತುಮಕೂರು ಸಂಚಾರಿ ಪೋಲೀಸ್ ಠಾಣೆ,
ತುಮಕೂರು

(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)

ವಿರುದ್ಧ

**ಆರೋಪಿದಾರರು** : ಮೊಹಮ್ಮದ್ ಉಮರ್ ಫಾರೂಕ್,
ಬಿನ್ ಲೇಟ್ ಮೊಹಮದ್ ಸಜನ್,
ಸುಮಾರು 22 ವರ್ಷಗಳು,
ವಾಸ : ಸಲೀಂ ಮಂಜಿಲ್, 1ನೇ ಕ್ರಾಸ್,
ವಿನೋಭನಗರ, ತುಮಕೂರು ನಗರ.

(ಆರೋಪಿ ಪರ ಶ್ರೀ ಎಂ.ಎ., ವಕೀಲರು)

| | | |
|---|---|---|
| ಪಿರ್ಯಾದುದಾರರ ಹೆಸರು | : | ಶಹೀದ್ ಪರ್ವೀಜ್ ಖಾನ್,<br>ಬಿನ್ ಮೀನಾಜ್ ಪರ್ವೀಜ್ ಖಾನ್ |
| ಅಪಘಾತ ಘಟಿಸಿದ ದಿನಾಂಕ | : | 21-01-2019 |
| ಪಿರ್ಯಾದಿ ದಾಖಲು ಮಾಡಿದ ದಿನಾಂಕ | : | 22-01-2021 |
| ಆರೋಪಿಸಲಾದ ಆಪಾದನೆಗಳು | : | ಭಾ.ದಂ.ಸಂ. ಕಲಂ.279, 337 ಮತ್ತು 304(ಎ) ಹಾಗೂ ಭಾ.ಮೋ.ವಾ. ಕಾಯ್ದೆ |

| | | |
|---|---|---|
| | | ಕಲಂ.196ರಡಿ |
| ಆರೋಪಿಯನ್ನು ದಸ್ತಗಿರಿ ಮಾಡಿದ ದಿನಾಂಕ | : | - - |
| ಸಾಕ್ಷಿಗಳ ವಿಚಾರಣೆ ಪ್ರಾರಂಭವಾದ ದಿನಾಂಕ | : | 12-06-2026 |
| ಸಾಕ್ಷಿಗಳ ವಿಚಾರಣೆ ಮುಕ್ತಾಯವಾದ ದಿನಾಂಕ | : | 18-07-2026 |
| ತೀರ್ಪು ಉಚ್ಛರಿಸಿದ ದಿನಾಂಕ | : | 24-07-2026 |
| ನ್ಯಾಯಾಧೀಶರ ತೀರ್ಮಾನ | : | ನಿರ್ದೋಷಿ ಎಂದು ಘೋಷಿಸಿ ಖುಲಾಸೆ ಮಾಡಲಾಗಿದೆ. |

Sd/-
(ಗಾಯತ್ರಿ ಎನ್.)
9ನೇ ಅಧಿಕ ಸಿವಿಲ್ ಜಡ್ಜ್ ಮತ್ತು 10ನೇ ಜೆ.ಎಂ.ಎಫ್.ಸಿ.,
ತುಮಕೂರು.

**ತೀರ್ಪು**

ವೃತ್ತ ನಿರೀಕ್ಷಕರು, ತುಮಕೂರು ನಗರ ವೃತ್ತ, ತುಮಕೂರು, ಇವರು ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ.279, 337 ಮತ್ತು 304(ಎ) ಹಾಗೂ ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ.196ರಡಿಯಲ್ಲಿ ಅಪರಾಧಗಳನ್ನೆಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ**:

ದಿನಾಂಕ 21-01-2021ರಂದು ರಾತ್ರಿ 9:55 ಗಂಟೆ ಸಮಯದಲ್ಲಿ ತುಮಕೂರು ನಗರ ಸಂಚಾರಿ ಪೋಲೀಸ್ ಠಾಣಾ ಸರಹದ್ದಿನ, ದಾನಃ ಪ್ಯಾಲೇಸ್ ಮುಂಭಾಗದಲ್ಲಿ ರಿಂಗ್ ರಸ್ತೆಯಲ್ಲಿ ಆರೋಪಿಯು ವಿಮೆ ಇಲ್ಲದ ವಾಹನ ಸಂಖ್ಯೆ ಕೆಎ-06-ಇಕ್ಯೂ-6873ನೇ ಮೋಪೆಡ್‌ನಲ್ಲಿ ಚಾ.ಸಾ.-3ರವರನ್ನು ಕೂರಿಸಿಕೊಂಡು ಮೊಪೆಡ್‌ನ್ನು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಕುಣಿಗಲ್ ಜಂಕ್ಷನ್ ಕಡೆಯಿಂದ ಗುಬ್ಬಿ ಸರ್ಕಲ್ ಕಡೆಗೆ ಬರುತ್ತಿದ್ದ ಚಾ.ಸಾ.-9ರವರ ಮಗನಾದ ಮಹಮದ್ ಇಸ್ರಾರ್ ಅಹಮದ್‌ರವರು ಚಾಲನೆ ಮಾಡುತ್ತಿದ್ದ ವಾಹನ

ಸಂಖ್ಯೆ ಕೆಎ-44-ಎಲ್-5941ನೇ ಬೈಕಿಗೆ ಡಿಕ್ಕಿ ಹೊಡೆದು ಅಪಘಾತಪಡಿಸಿದ ಪರಿಣಾಮ, ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕ್ ಚಾಲನೆ ಮಾಡುತ್ತಿದ್ದ ಚಾ.ಸಾ.-9ರವರ ಮಗ ಮಹಮದ್ ಇಸ್ರಾರ್ ಅಹಮದ್ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಬೈಕ್‌ನ ಹಿಂಬದಿಯಲ್ಲಿದ್ದ ಚಾ.ಸಾ.-2 ಜವಾದ್‌ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ತನಿಖೆಯಿಂದ ದೃಡಪಟ್ಟಿದ್ದು, ಆ ಮೂಲಕ ಆರೋಪಿಯು ಭಾರತ ದಂಡ ಸಂಹಿತೆಯ ಕಲಂ.279, 337 ಮತ್ತು 304(ಎ) ಹಾಗೂ ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ.196ರಡಿಯಲ್ಲಿನ ಅಪರಾಧಗಳನ್ನು ಎಸಗಿದ್ದಾರೆ ಎಂಬುದಾಗಿರುತ್ತದೆ.

3. ತನಿಖಾಧಿಕಾರಿಯವರು ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.190(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಭಾರತ ದಂಡ ಸಂಹಿತೆಯ ಕಲಂ 279, 337 ಮತ್ತು 304(ಎ) ಹಾಗೂ ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ 196ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ಸಂಜ್ಞತೆಯನ್ನು ತೆಗೆದುಕೊಂಡು, ಆರೋಪಿಗೆ ಸಮನ್ಸ್ ನೀಡಲಾಗಿದ್ದು, ಆರೋಪಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನನ್ನು ಪಡೆದುಕೊಂಡಿದ್ದು, ಆರೋಪಿಗೆ ಅಭಿಯೋಜನೆಯ ಪ್ರಕರಣದ ಪ್ರತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರಂತೆ ಪೂರೈಸಲಾಗಿರುತ್ತದೆ. ನಂತರ ಆರೋಪಿಯ ವಿರುದ್ಧ ಆಪಾದನೆಯನ್ನು ರಚಿಸಿ, ಆಪಾದನಾ ಸಾರಾಂಶವನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ, ಹೇಳಿ, ವಿವರಿಸಲಾಗಿ ಆರೋಪಿಯು ತಾನು ಯಾವುದೇ ತಪ್ಪನ್ನು ಮಾಡಿರುವುದಿಲ್ಲವೆಂದು ಮತ್ತು ಪ್ರತಿರಕ್ಷೆ ಬಯಸುವುದಾಗಿ ನುಡಿದಿದ್ದರಿಂದ, ಅಭಿಯೋಜನೆಯ ಪರ ಸಾಕ್ಷಿದಾರರುಗಳ ವಿಚಾರಣೆಗಾಗಿ, ಸಾಕ್ಷಿದಾರರುಗಳಿಗೆ ಸಮನ್ಸ್ ಹೊರಡಿಸಿ ಪ್ರಕರಣವನ್ನು ಮುಂದೂಡಲಾಗಿರುತ್ತದೆ.

4. ಆರೋಪಿಯ ವಿರುದ್ದ ಆಪಾದಿಸಲಾಗಿರುವ ಆಪಾದನೆಗಳನ್ನು ಸಾಬೀತುಪಡಿಸುವ ಹೊಣೆಯು ಅಭಿಯೋಜನೆಯವರ ಮೇಲಿದ್ದು, ಅಭಿಯೋಜನೆಯು ತಮ್ಮ ಪರವಾಗಿ ಮೂವರು ಸಾಕ್ಷಿದಾರರನ್ನು ಪ್ರಾ.ಸಾ.-1 ರಿಂದ ಪ್ರಾ.ಸಾ.-3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಎಂಟು

ದಾಖಲೆಗಳನ್ನು ನಿ.ಪಿ-1 ರಿಂದ ನಿಶಾನೆ ಪಿ.-8 ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಶವ ತನಿಖಾ ವರದಿ, ಶವ ಪರೀಕ್ಷಾ ವರದಿ ಮತ್ತು ಐ.ಎಂ.ವಿ. ವರದಿಯನ್ನು ನಿಶಾನೆ ಪಿ.-6 ರಿಂದ ನಿಶಾನೆ ಪಿ.-8 ಎಂದು ಆರೋಪಿ ಪರ ವಕೀಲರ ಅನುಮತಿ ಮೇರೆಗೆ ನಿಶಾನೆಗೊಳಿಸಿರುವ ಕಾರಣ, ಆ ಸಂಬಂಧಿತ ಅಭಿಯೋಜನೆ ಪರ ಸಾಕ್ಷಿದಾರರುಗಳಾದ ಚಾ.ಸಾ.-6 ರಿಂದ 10, 12 ರಿಂದ 15ರವರನ್ನು ಅಭಿಯೋಜನೆಯವರ ಪ್ರಾರ್ಥನೆಯ ಮೇರೆಗೆ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ.

5. ಈ ಪ್ರಕರಣದ ಮುಖ್ಯ ಸಾಕ್ಷಿದಾರರುಗಳ ಸಾಕ್ಷ್ಯ ಹೇಳಿಕೆಗಳನ್ನು ಮತ್ತು ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿದ ಮೇರೆಗೆ, ಆರೋಪಿಯ ವಿರುದ್ಧ ಆಪಾದಿಸಿರುವ ಆಪಾದನೆಗಳನ್ನು ರುಜುವಾತುಪಡಿಸುವ ಯಾವುದೇ ದೋಷಾರೋಪಣಾ ಸಾಕ್ಷ್ಯವು ಆರೋಪಿಯ ವಿರುದ್ಧ ಕಂಡು ಬಂದಿರುವುದಿಲ್ಲವಾದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿಯ ಹೇಳಿಕೆ ದಾಖಲಿಸುವುದನ್ನು ಕೈಬಿಡಲಾಗಿರುತ್ತದೆ.

6. ಉಭಯ ಪಕ್ಷಗಾರರ ವಾದ ಮತ್ತು ಪ್ರತಿವಾದಗಳನ್ನು ಆಲಿಸಿದ್ದು, ಈ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯ ಹೇಳಿಕೆಗಳನ್ನು ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದು, ಅಭಿಯೋಜನೆಯವರು ಆರೋಪಿಯ ವಿರುದ್ಧ ಆಪಾದಿಸಿರುವ ಆಪಾದನೆಗಳ ಮೇರೆಗೆ ಈ ನ್ಯಾಯಾಲಯದ ಗಮನಕ್ಕೆ ಈ ಕೆಳಕಂಡಂತೆ ಅಂಶಗಳು ಉದ್ಭವಿಸಿರುತ್ತವೆ;

1. ದಿನಾಂಕ 21.01.2021ರಂದು ರಾತ್ರಿ 9:55 ಗಂಟೆಯ ಸಮಯದಲ್ಲಿ ತುಮಕೂರು ಸಂಚಾರಿ ಪೋಲೀಸ್ ಠಾಣಾ ಸರಹದ್ದಿನ, ದಾನಃ ಪ್ಯಾಲೇಸ್ ಮುಂಭಾಗದಲ್ಲಿ ರಿಂಗ್ ರಸ್ತೆಯಲ್ಲಿ ಆರೋಪಿಯು ವಾಹನ ಸಂಖ್ಯೆ ಕೆಎ-06-ಇಕ್ಯೂ-6873ನೇ ಮೋಪೆಡ್‌ನಲ್ಲಿ ಚಾ.ಸಾ.-3ರವರನ್ನು ಕೂರಿಸಿಕೊಂಡು ಮೊಪೇಡ್‌ನ್ನು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವಾಹನವನ್ನು ಅತಿವೇಗವಾಗಿ, ಅಜಾಗರೂಕತೆಯಿಂದ, ಮಾನವ ಪ್ರಾಣಕ್ಕೆ ಹಾನಿ

ಉಂಟಾಗುವ ರೀತಿಯಲ್ಲಿ, ನಿರ್ಲಕ್ಷ್ಯತೆಯಿಂದ ಓಡಿಸಿಕೊಂಡು ಹೋಗಿ ಕುಣಿಗಲ್ ಜಂಕ್ಷನ್ ಕಡೆಯಿಂದ - ಗುಬ್ಬಿ ಸರ್ಕಲ್ ಕಡೆಗೆ ಬರುತ್ತಿದ್ದ ಚಾ.ಸಾ.-9ರವರ ಮಗನಾದ ಮಹಮದ್ ಇಸ್ರಾರ್ ಅಹಮದ್‌ರವರು ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕ್‌ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದು, ಆ ಮೂಲಕ ಆರೋಪಿಯು ಭಾರತ ದಂಡ ಸಂಹಿತೆ ಕಲಂ 279ರಡಿಯಲ್ಲಿನ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?

2. ಈ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ವಾಹನ ಸಂಖ್ಯೆ ಕೆಎ-06-ಇಕ್ಯೂ-6873ನೇ ಮೋಪೆಡ್‌ನಲ್ಲಿ ಚಾ.ಸಾ.-3 ರವರನ್ನು ಕೂರಿಸಿಕೊಂಡು ಮೊಪೇಡ್‌ನ್ನು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವಾಹನವನ್ನು ಅತಿವೇಗವಾಗಿ, ಅಜಾಗರೂಕತೆಯಿಂದ, ಮಾನವ ಪ್ರಾಣಕ್ಕೆ ಹಾನಿ ಉಂಟಾಗುವ ರೀತಿಯಲ್ಲಿ, ನಿರ್ಲಕ್ಷ್ಯತೆಯಿಂದ ಓಡಿಸಿಕೊಂಡು ಹೋಗಿ ಕುಣಿಗಲ್ ಜಂಕ್ಷನ್ ಕಡೆಯಿಂದ - ಗುಬ್ಬಿ ಸರ್ಕಲ್ ಕಡೆಗೆ ಬರುತ್ತಿದ್ದ ಚಾ.ಸಾ.-9ರವರ ಮಗನಾದ ಮಹಮದ್ ಇಸ್ರಾರ್ ಅಹಮದ್‌ರವರು ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕ್‌ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದರ ಪರಿಣಾಮ, ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕ್ ಚಾಲನೆ ಮಾಡುತ್ತಿದ್ದ ಚಾ.ಸಾ.-9ರವರ ಮಗ ಮಹಮದ್ ಇಸ್ರಾರ್ ಅಹಮದ್‌ರವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆ ಮೂಲಕ ಆರೋಪಿಯು ಅಪರಾಧಿಕ ಮಾನವ ಹತ್ಯೆಯೆಂದು ಪರಿಗಣಿಸಲಾಗದ ತನ್ನ ದುಡುಕು ಮತ್ತು ನಿರ್ಲಕ್ಷ್ಯತನದ ಚಾಲನೆಯ ಮೂಲಕ ಸದರಿ ವ್ಯಕ್ತಿಯ ಮರಣವನ್ನುಂಟು ಮಾಡಿದ್ದು, ಆ

ಮೂಲಕ ಆರೋಪಿಯು ಭಾರತ ದಂಡ ಸಂಹಿತೆ ಕಲಂ 304(ಎ)ರಡಿಯ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ ?

3. ಈ ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ವಾಹನ ಸಂಖ್ಯೆ ಕೆಎ-06-ಇಕ್ಯೂ-6873ನೇ ಮೋಪೆಡ್‌ನಲ್ಲಿ ಚಾ.ಸಾ.-3ರವರನ್ನು ಕೂರಿಸಿಕೊಂಡು ಮೊಪೇಡ್‌ನ್ನು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವಾಹನವನ್ನು ಅತಿವೇಗವಾಗಿ, ಅಜಾಗರೂಕತೆಯಿಂದ, ಮಾನವ ಪ್ರಾಣಕ್ಕೆ ಹಾನಿ ಉಂಟಾಗುವ ರೀತಿಯಲ್ಲಿ, ನಿರ್ಲಕ್ಷ್ಯತೆಯಿಂದ ಓಡಿಸಿಕೊಂಡು ಹೋಗಿ ಕುಣಿಗಲ್ ಜಂಕ್ಷನ್ ಕಡೆಯಿಂದ - ಗುಬ್ಬಿ ಸರ್ಕಲ್ ಕಡೆಗೆ ಬರುತ್ತಿದ್ದ ಚಾ.ಸಾ.-9ರವರ ಮಗನಾದ ಮಹಮದ್ ಇಸ್ರಾರ್ ಅಹಮದ್‌ರವರು ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕ್‌ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದರ ಪರಿಣಾಮ, ಬೈಕ್‌ನ ಹಿಂಬದಿಯಲ್ಲಿದ್ದ ಚಾ.ಸಾ.-2 ಜವಾದ್‌ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ಆರೋಪಿಯು ಭಾರತ ದಂಡ ಸಂಹಿತೆಯ ಕಲಂ 337ರಡಿಯ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

4. ಈ ಮೇಲ್ಕಂಡ ದಿನಾಂಕದಂದು ಅಪಘಾತಪಡಿಸಿದ ವಾಹನ ಸಂಖ್ಯೆ ಕೆಎ-06-ಇಕ್ಯೂ-6873ನೇ ಮಾಲೀಕರಾದ ಆರೋಪಿಯು ಸದರಿ ವಾಹನಕ್ಕೆ ವಿಮೆಯನ್ನು ಮಾಡಿಸದೇ ಅದನ್ನು ಚಾಲನೆ ಮಾಡಿ ಅಪಘಾತಪಡಿಸಿದ್ದು, ಆ ಮೂಲಕ ಆರೋಪಿಯು ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ.196ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

5. ಆದೇಶ ಏನು ?

7. ಈ ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆ:

**ಅಂಶ ಸಂಖ್ಯೆ 1 : ನಕಾರಾತ್ಮಕವಾಗಿ**

**ಅಂಶ ಸಂಖ್ಯೆ 2 : ನಕಾರಾತ್ಮಕವಾಗಿ**

**ಅಂಶ ಸಂಖ್ಯೆ 3 : ನಕಾರಾತ್ಮಕವಾಗಿ**

**ಅಂಶ ಸಂಖ್ಯೆ 4 : ನಕಾರಾತ್ಮಕವಾಗಿ**

**ಅಂಶ ಸಂಖ್ಯೆ 5 : ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ ;**

**ಕಾರಣಗಳು**

8. **ಅಂಶ ಸಂಖ್ಯೆ 1 ರಿಂದ 4** : ಸದರಿ ಅಂಶಗಳು ಪರಸ್ಪರ ಒಂದಕ್ಕೊಂದು ಪೂರಕವಾಗಿದ್ದು, ಚರ್ಚೆಯ ವೇಳೆ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಎಲ್ಲ ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

9. ಅಭಿಯೋಜನೆಯು ಆರೋಪಿಯ ವಿರುದ್ಧ ಆಪಾದಿಸಿರುವ ಆಪಾದನೆಗಳನ್ನು ರುಜುವಾತುಪಡಿಸುವ ಹೊಣೆಯು ಅಭಿಯೋಜನೆಯವರ ಮೇಲಿದ್ದು, ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯವರ ನಿರ್ಧಿಷ್ಟ ಆಪಾದನೆ ಏನೆಂದರೆ, ದಿನಾಂಕ 21-01-2021ರಂದು ರಾತ್ರಿ 9:55 ಗಂಟೆ ಸಮಯದಲ್ಲಿ ತುಮಕೂರು ನಗರ ಸಂಚಾರಿ ಪೋಲೀಸ್ ಠಾಣಾ ಸರಹದ್ದಿನ, ದಾನಃ ಪ್ಯಾಲೇಸ್ ಮುಂಭಾಗದಲ್ಲಿ ರಿಂಗ್ ರಸ್ತೆಯಲ್ಲಿ ಆರೋಪಿಯು ವಿಮೆ ಇಲ್ಲದ ವಾಹನ ಸಂಖ್ಯೆ ಕೆಎ-06-ಇಕ್ಯೂ-6873ನೇ ಮೋಪೆಡ್‌ನಲ್ಲಿ ಚಾ.ಸಾ.-3ರವರನ್ನು ಕೂರಿಸಿಕೊಂಡು ಮೊಪೆಡ್‌ನ್ನು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಕುಣಿಗಲ್ ಜಂಕ್ಷನ್ ಕಡೆಯಿಂದ ಗುಬ್ಬಿ ಸರ್ಕಲ್ ಕಡೆಗೆ ಬರುತ್ತಿದ್ದ ಚಾ.ಸಾ.-9ರವರ ಮಗನಾದ ಮಹಮದ್ ಇಸ್ರಾರ್ ಅಹಮದ್‌ರವರು ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕಿಗೆ

ಡಿಕ್ಕಿ ಹೊಡೆದು ಅಪಘಾತಪಡಿಸಿದ ಪರಿಣಾಮ, ವಾಹನ ಸಂಖ್ಯೆ ಕೆಎ-44-ಎಲ್-5941ನೇ ಬೈಕ್ ಚಾಲನೆ ಮಾಡುತ್ತಿದ್ದ ಚಾ.ಸಾ.-9ರವರ ಮಗ ಮಹಮದ್ ಇಸ್ರಾರ್ ಅಹಮದ್ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಬೈಕ್‌ನ ಹಿಂಬದಿಯಲ್ಲಿದ್ದ ಚಾ.ಸಾ.-2 ಜವಾದ್‌ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂಬುದಾಗಿರುತ್ತದೆ.

10. ಆರೋಪಿಯ ವಿರುದ್ಧ ಆಪಾದಿಸಿರುವ ಆಪಾದನೆಗಳನ್ನು ಸಾಬೀತುಪಡಿಸುವುದಕ್ಕಾಗಿ, ಅಭಿಯೋಜನೆಯು ತಮ್ಮ ಪರವಾಗಿನ ಈ ಪ್ರಕರಣದ ಪಿರ್ಯಾದು ಸಾಕ್ಷಿದಾರರಾದ ಚಾ.ಸಾ.-1ರವರನ್ನು ಪ್ರಾ.ಸಾ.-1 ಎಂದು, ಗಾಯಾಳು ಹಾಗೂ ಅಪಘಾತವನ್ನು ಕಣ್ಣಾರೆ ನೋಡಿದ ಪ್ರತ್ಯಕ್ಷ ಸಾಕ್ಷಿದಾರರಾದ ಚಾ.ಸಾ.-2ರವರನ್ನು ಪ್ರಾ.ಸಾ.-2 ಎಂದು, ಅಪಘಾತವನ್ನು ಕಣ್ಣಾರೆ ನೋಡಿದ ಮತ್ತೊಬ್ಬ ಪ್ರತ್ಯಕ್ಷ ಹಾಗೂ ಸ್ಥಳ ಪಂಚನಾಮೆಯ ಪಂಚರು ಸಾಕ್ಷಿದಾರರಾದ ಚಾ.ಸಾ.-3 ರವರನ್ನು ಪ್ರಾ.ಸಾ.-3 ಎಂದು ವಿಚಾರಣೆಗೊಳಪಡಿಸಿದ್ದು, ತಮ್ಮ ಪರವಾಗಿ ಒಟ್ಟು 8 ದಾಖಲೆಗಳನ್ನು ನಿಶಾನೆ ಪಿ.-1 ರಿಂದ ನಿಶಾನೆ ಪಿ.-8 ಎಂದು ಗುರುತಿಸಿಕೊಂಡಿದ್ದು, ನಿಶಾನೆ ಪಿ.-1 ದೂರು, ನಿಶಾನೆ ಪಿ.-2 ಸ್ಥಳ ಪಂಚನಾಮೆ, ನಿಶಾನೆ ಪಿ.-3 ಕಚ್ಛಾ ನಕಾಶೆ, ನಿಶಾನೆ ಪಿ.-4 ಪ್ರಾ.ಸಾ.-2ರವರ ಹೇಳಿಕೆ, ನಿಶಾನೆ ಪಿ.-5 ಪ್ರಾ.ಸಾ.-3ರವರ ಹೇಳಿಕೆ, ನಿಶಾನೆ ಪಿ.-6 ಶವ ತನಿಖಾ ವರದಿ, ನಿಶಾನೆ ಪಿ.-7ಶವ ಪರೀಕ್ಷಾ ವರದಿ, ನಿಶಾನೆ ಪಿ.-8 ಐ.ಎಂ.ವಿ. ವರದಿಯ ದಾಖಲೆಗಳಾಗಿರುತ್ತವೆ.

11. ಚಾ.ಸಾ.-1-ಶಾಹೀದ್ ಪರ್ವೇಜ್ ಖಾನ್, ಇವರು ಈ ಪ್ರಕರಣದ ಪಿರ್ಯಾದು ಹಾಗೂ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ಅಭಿಯೋಜನೆಯು ಇವರನ್ನು ಪ್ರಾ.ಸಾ.-1 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಸುಮಾರು 5 ವರ್ಷಗಳ ಹಿಂದೆ ದಾನಃ ಪ್ಯಾಲೇಸ್ ಮುಂದೆ ಪೋಲೀಸರು ಹೇಳಿದ್ದಕ್ಕೆ ನಿಶಾನೆ ಪಿ.-1 ರಿಂದ ನಿಶಾನೆ ಪಿ.-3 ದಾಖಲೆಗಳಿಗೆ ಸಹಿಯನ್ನು ಮಾಡಿದ್ದು, ಆದರರೆ, ಸದರಿ ದಾಖಲೆಗಳು ಏನು, ಅವುಗಳಲ್ಲಿ ಏನೆಲ್ಲಾ ಅಂಶಗಳು ಬರೆದಿದೆ ಎಂಬ ಬಗ್ಗೆ ಗೊತ್ತಿಲ್ಲವೆಂದು, ಪೋಲೀಸರು ಯಾವ ಉದ್ದೇಶಕ್ಕಾಗಿ ತನ್ನ ಸಹಿಗಳನ್ನು ಪಡೆದರೆಂದು ತನಗೆ ಗೊತ್ತಿಲ್ಲವೆಂದು, ಪೋಲೀಸರು ಸದರಿ ದಾಖಲೆಯಲ್ಲಿನ ಅಂಶಗಳನ್ನು ಓದಿ ಹೇಳಿರುವುದಿಲ್ಲ ಹಾಗೂ ತಾನೂ ಸಹ ಓದಿ ತಿಳಿದುಕೊಂಡಿಲ್ಲವೆಂದು, ಪೋಲೀಸರಿಗೆ ತಾನು ಯಾವುದೇ ದೂರನ್ನು

ಕೊಟ್ಟಿಲ್ಲವೆಂದು, ಪೋಲೀಸರು ತನ್ನ ಸಮಕ್ಷಮ ಸ್ಥಳ ಪಂಚನಾಮೆಯನ್ನು ತಯಾರಿಸಿಲ್ಲವೆಂದು ಮತ್ತು ಅಮಾನತ್ತುಪಡಿಸಿಕೊಂಡಿರುವುದಿಲ್ಲವೆಂದು, ಕೇವಲ ಪೋಲೀಸರು ಹೇಳಿದ್ದಕ್ಕೆ ತಾನು ತನ್ನ ಸಹಿಗಳನ್ನು ನಿಶಾನೆ ಪಿ.-1 ರಿಂದ ನಿಶಾನೆ ಪಿ.-3 ದಾಖಲೆಗಳಿಗೆ ಸಹಿಯನ್ನು ಮಾಡಿದ್ದರ ಹೊರತಾಗಿ ತನಗೆ ಈ ಕೇಸಿನ ಕುರಿತಾಗಿ ಬೇರೇನೂ ಗೊತ್ತಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

12. ಆ ಸಮಯದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯೊಂದಿಗೆ ಪ್ರಾ.ಸಾ.-1ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಂಪೂರ್ಣ ಪಾಟೀ ಸವಾಲಿಗೆ ಒಳಪಡಿಸಿದ್ದು, ಪ್ರಾ.ಸಾ.-1ರವರು ಪಾಟೀಸವಾಲಿನಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದು, ಸ್ವತಃ ಮುಂದುವರೆದು, ತಾನು ಪೋಲೀಸರ ಹೇಳಿಕೆಯ ಮೇರೆಗೆ ಪೋಲೀಸ್ ಠಾಣೆಯಲ್ಲಿ ನಿಶಾನೆ ಪಿ.-1 ರಿಂದ ನಿಶಾನೆ ಪಿ.-3 ದಾಖಲೆಗಳಿಗೆ ತನ್ನ ಸಹಿಗಳನ್ನು ಮಾಡಿದ್ದಷ್ಟರ ಹೊರತಾಗಿ, ಈ ಪ್ರಕರಣದಲ್ಲಿನ ಆರೋಪಿ ಯಾರು ಮತ್ತು ಪ್ರಕರಣ ಏನು ಎಂಬುದರ ಕುರಿತಾಗಿ ತನಗೆ ಯಾವುದೇ ಮಾಹಿತಿ ಇಲ್ಲವೆಂದು ನುಡಿಯುವ ಮೂಲಕ ತನ್ನ ಮುಖ್ಯ ವಿಚಾರಣೆಯಲ್ಲಿ ತೋರಿದ ತಟಸ್ಥ ನಿಲುವನ್ನೇ ತೋರಿರುತ್ತಾರೆ.

13. ಚಾ.ಸಾ.-2-ಕೆಂಪರಾಜು, ಇವರು ಅಪಘಾತವನ್ನು ಕಣ್ಣಾರೆ ನೋಡಿದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಭಿಯೋಜನೆಯು ಇವರನ್ನು ಪ್ರಾ.ಸಾ.-2 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣಾ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತೆಂದು, ಆತನ ತನ್ನ ಸ್ನೇಹಿತನೆಂದು, ತಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲವೆಂದು, ಆ ಸಂಬಂಧಿತ ತಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲವೆಂದು, ಪೋಲೀಸರು ಬಂದು ನ್ಯಾಯಾಲಯಕ್ಕೆ ಬರಬೇಕೆಂದು ಹೇಳಿದ್ದಕ್ಕೆ ನ್ಯಾಯಾಲಯಕ್ಕೆ ಬಂದಿದ್ದಷ್ಟರ ಹೊರತಾಗಿ ತನಗೆ ಈ ಪ್ರಕರಣದ ಕುರಿತಾಗಿ ಯಾವುದೇ ಮಾಹಿತಿ ಇಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಆ ಸಮಯದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯೊಂದಿಗೆ ಪ್ರಾ.ಸಾ.-2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಂಪೂರ್ಣ ಪಾಟೀ ಸವಾಲಿಗೆ ಒಳಪಡಿಸಿದ್ದು, ಪ್ರಾ.ಸಾ.-2ರವರು ಪಾಟೀಸವಾಲಿನಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದು, ತನಗೆ ಆರೋಪಿ ಯಾರೆಂದು ಗೊತ್ತಿಲ್ಲವೆಂದು, ತಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಮತ್ತು ತನಗೆ ಈ ಕೇಸಿನ ಕುರಿತಾಗಿ ಯಾವುದೇ ಮಾಹಿತಿ ಇಲ್ಲವೆಂದು ನುಡಿಯುವ ಮೂಲಕ ತನ್ನ ಮುಖ್ಯ ವಿಚಾರಣೆಯಲ್ಲಿ ತೋರಿದ ತಟಸ್ಥ ನಿಲುವನ್ನೇ ತೋರಿರುತ್ತಾರೆ.

15. ಚಾ.ಸಾ.-2-ಜಾವೆದ್ ಅಹಮದ್, ಇವರು ಅಪಘಾತದಲ್ಲಿ ಗಾಯಗೊಂಡ ನೊಂದ ಹಾಗೂ ಅಪಘಾತವನ್ನು ಕಣ್ಣಾರೆ ನೋಡಿದ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಭಿಯೋಜನೆಯು ಇವರನ್ನು ಪ್ರಾ.ಸಾ.-3 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಚಾ.ಸಾ.-1 ಯಾರೆಂದು ತನಗೆ ಗೊತ್ತಿಲ್ಲವೆಂದು, ಈ ಹಿಂದೆ ತನಗೆ ಅಪಘಾತವಾಗಿದ್ದು, ಆ ಸಂಬಂಧಿತ ಯಾವುದೇ ಮಾಹಿತಿ ಇಲ್ಲವೆಂದು, ಕೇವಲ ನ್ಯಾಯಾಲಯದಿಂದ ಸಮನ್ಸ್ ಬಂದ ಕಾರಣ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

16. ಆ ಸಮಯದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯೊಂದಿಗೆ ಪ್ರಾ.ಸಾ.-3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಂಪೂರ್ಣ ಪಾಟೀ ಸವಾಲಿಗೆ ಒಳಪಡಿಸಿದ್ದು, ಪ್ರಾ.ಸಾ.-3ರವರು ಪಾಟೀಸವಾಲಿನಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದು ಸ್ವತಃ ಮುಂದುವರೆದು, ತನಗೆ ಆರೋಪಿ ಗೊತ್ತಿಲ್ಲವೆಂದು, ತನಗೆ ಯಾವುದೇ ಅಪಘಾತ ಆಗಿರುವುದಿಲ್ಲ ಮತ್ತು ಅಪಘಾತದಿಂದಾಗಿ ಎಂದೂ ಗಾಯಗೊಂಡಿರುವುದಿಲ್ಲವೆಂದು, ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಹಾಗೂ ಈ ಕೇಸಿನ ಕುರಿತಾಗಿ ತನಗೇನು ಗೊತ್ತಿಲ್ಲವೆಂದು ನುಡಿಯುವ ಮೂಲಕ ತನ್ನ ಮುಖ್ಯ ವಿಚಾರಣೆಯಲ್ಲಿ ತೋರಿದ ತಟಸ್ಥ ನಿಲುವನ್ನೇ ತೋರಿರುತ್ತಾರೆ.

17. ಅಭಿಯೋಜನೆಯ ಪರ ವಿಚಾರಣೆಗೊಂಡಂತಹ ಈ ಪ್ರಕರಣದ ಪ್ರಮುಖ ಸಾಕ್ಷಿದಾರರುಗಳಾದ ಪ್ರಾ.ಸಾ.-1 ರಿಂದ ಪ್ರಾ.ಸಾ.-3ರವರುಗಳು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದರಿಂದ, ಅವರುಗಳನ್ನು ಪ್ರತಿಕೂಲ ಸಾಕ್ಷಿದಾರರುಗಳೆಂದು ಪರಿಗಣಿಸಿ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅವರುಗಳನ್ನು ಸಂಪೂರ್ಣ ಪಾಟೀಸವಾಲಿಗೆ ಒಳಪಡಿಸಿದ್ದಾಗ್ಯೂ ಸಹ, ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಅಂಶಗಳನ್ನು ಪ್ರಾ.ಸಾ.-1 ರಿಂದ ಪ್ರಾ.ಸಾ.-3 ರವರುಗಳ ಬಾಯಿಂದ ಹೊರತರುವಲ್ಲಿ ಅಭಿಯೋಜನೆಯು ಸಂಪೂರ್ಣ ವೈಫಲ್ಯವನ್ನು ಕಂಡಿದ್ದು, ಈ ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು **1996 (3) Crimes 84 Sathish Mehra V/s Delhi Administration & another**: ಪ್ಯಾರಾ 13ರಲ್ಲಿ ,

> "***When the judge is fairly certain that there is no prospect of the case ending in conviction the valuable time of the court should not be wasted for holding trial the purpose of formally completing the procedure to pronounce the conclusion on the future date***".

ಹೇಳಿರುವ ತತ್ವದ ಅನುಸಾರವಾಗಿ, ಶೀಘ್ರ ನ್ಯಾಯ ವಿತರಣೆಯ ದೃಷ್ಟಿಯಿಂದ ಅಭಿಯೋಜನೆಯ ಪರ ಉಳಿದ ಸಾಕ್ಷಿದಾರರುಗಳಿಗೆ ಸಮನ್ಸ್ ನೀಡಬೇಕೆಂಬ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮನವಿಯನ್ನು ತಿರಸ್ಕರಿಸಿ, ಉಳಿದ ಸಾಕ್ಷಿದಾರರುಗಳ ವಿಚಾರಣೆಯನ್ನು ಮನ್ನಾ ಮಾಡಲಾಗಿರುತ್ತದೆ.

18. ಒಟ್ಟಾರೆಯಾಗಿ, ಅಭಿಯೋಜನೆಯ ಪರ ವಿಚಾರಣೆಗೊಂಡಂತಹ ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರರುಗಳೆನ್ನಲಾದ ಪಿರ್ಯಾದು ಮತ್ತು ಸ್ಥಳ ಪಂಚನಾಮೆ ಸಾಕ್ಷಿದಾರರಾದ ಪ್ರಾ.ಸಾ.-1, ಅಪಘಾತವನ್ನು ಕಣ್ಣಾರೆ ನೋಡಿದ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ.-2, ಗಾಯಾಳು ಮತ್ತು ಅಪಘಾತವನ್ನು ಕಣ್ಣಾರೆ ನೋಡಿದ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ.-3ರವರುಗಳ್ಯಾರೂ ಅಭಿಯೋಜನೆಯು ಆರೋಪಿಯ ವಿರುದ್ಧ ಆಪಾದಿಸಿರುವ ಆಪಾದನೆಗಳನ್ನು ಸಾಬೀತುಪಡಿಸುವ

ಯಾವುದೇ ಆಪಾದನಾ ಸಾಕ್ಷ್ಯವನ್ನು ನುಡಿದಿರುವುದಿಲ್ಲವಾದ್ದರಿಂದ, ಅಭಿಯೋಜನೆಯ ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆಯಲ್ಲದೇ, ಆರೋಪಿಯ ವಿರುದ್ಧ ಹೊರಿಸಲಾದ ಆಪಾದನೆಗಳು ಕೇವಲ ಆಪಾದನೆಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾ ಧಾರಗಳಿಂದ ರುಜುವಾತು ಆಗಿರುವುದಿಲ್ಲವಾದ ಕಾರಣ, ಆರೋಪಿಯ ವಿರುದ್ಧ ಹೊರಿಸಲಾದ ಮೇಲ್ಕಂಡ ಆಪಾದನೆಗಳನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿದ್ದು, ಆರೋಪಿಗೆ ಸಂಶಯದ ಲಾಭವನ್ನು ನೀಡಬೇಕಾಗಿರುವುದು ಅಪರಾಧಿಕ ಕಾನೂನಿನ ತತ್ವವಾಗಿದ್ದು, ಅಭಿಯೋಜನೆಯವರ ಈ ಪ್ರಕರಣದ ಸಂಶಯದ ಲಾಭವನ್ನು ಆರೋಪಿಗೆ ನೀಡುತ್ತಾ, **ಮೇಲ್ಕಂಡ ಅಂಶ 1 ರಿಂದ 4 ಗಳನ್ನು ಈ ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸುತ್ತದೆ.**

19. **<u>ಅಂಶ ಸಂಖ್ಯೆ 5</u>**: ಮೇಲ್ಕಂಡಂತೆ ಅಂಶ ಸಂಖ್ಯೆ 1 ಮತ್ತು 2ರಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ, ಈ ನ್ಯಾಯಾಲಯವು ಕೆಳಕಂಡಂತೆ ಆದೇಶ ಮಾಡುತ್ತದೆ.

:**ಆದೇಶ**:

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 255(1) ರಡಿಯಲ್ಲಿ ವರ್ತಿಸುತ್ತಾ, ಆರೋಪಿಯನ್ನು ಭಾರತ ದಂಡ ಸಂಹಿತೆಯ ಕಲಂ.279, 337 ಮತ್ತು 304(ಎ) ಹಾಗೂ ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ.196ರಡಿಯಲ್ಲಿನ ಅಪರಾಧಗಳಿಂದ ದೋಷಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 24ನೇ ಜುಲೈ, 2026ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

Sd/-
(ಗಾಯತ್ರಿ ಎನ್.)
9ನೇ ಅಧಿಕ ಸಿವಿಲ್ ಜಡ್ಜ್ ಮತ್ತು 10ನೇ ಜೆ.ಎಂ.ಎಫ್.ಸಿ.,
ತುಮಕೂರು.

::**<u>ಅನುಬಂಧ</u>**::

**<u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿ ಗಳುಃ</u>**

ಪ್ರಾ.ಸಾ.-1 : ಷಾಹೀದ್ ಪರ್ವೇಜ್ ಖಾನ್ ಬಿನ್ ಮಿನಾಜ್ ಪರ್ವೇಸ್ ಖಾನ್

ಪ್ರಾ.ಸಾ.-2 : ಕೆಂಪರಾಜು ಬಿನ್ ನರಸಿಂಹಯ್ಯ

ಪ್ರಾ.ಸಾ.-3 : ಜಾವೆದ್ ಅಹಮದ್ ಬಿನ್ ಶಬ್ಬೀರ್ ಅಹಮದ್

**<u>ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳುಃ</u>**

ನಿಶಾನೆ ಪಿ.-1 : ದೂರು

ನಿಶಾನೆ ಪಿ.-1(ಎ) : ಪ್ರಾ.ಸಾ.-1ರವರ ಸಹಿ

ನಿಶಾನೆ ಪಿ.-2 : ಪ್ರಾ.ಸಾ.-2ರವರ ಹೇಳಿಕೆ

ನಿಶಾನೆ ಪಿ.-3 : ಸ್ಥಳ ಪಂಚನಾಮೆ

ನಿಶಾನೆ ಪಿ.-3(ಎ) : ಪ್ರಾ.ಸಾ.-3ರವರ ಸಹಿ

ನಿಶಾನೆ ಪಿ.-4 : ಕಚ್ಚಾ ನಕಾಶೆ

ನಿಶಾನೆ ಪಿ.-4(ಎ) : ಪ್ರಾ.ಸಾ.-3ರವರ ಸಹಿ

ನಿಶಾನೆ ಪಿ.-5 : ಪ್ರಾ.ಸಾ.-3ರವರ ಹೇಳಿಕೆ

ನಿಶಾನೆ ಪಿ.-6 : ಶವ ತನಿಖಾ ವರದಿ

ನಿಶಾನೆ ಪಿ.-7 : ಶವ ಪರೀಕ್ಷಾ ವರದಿ

ನಿಶಾನೆ ಪಿ.-8 : ಐ.ಎಂ.ವಿ. ವರದಿ

**<u>ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿ ಗಳುಃ</u>**

ಇಲ್ಲಾ

**<u>ಆರೋಪಿ ಪರ ಹಾಜರು ಪಡಿಸಿದ ದಾಖಲೆಗಳುಃ</u>**

ಇಲ್ಲಾ

**ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳು:**

ಇಲ್ಲಾ

Sd/-
(ಗಾಯತ್ರಿ ಎನ್.)
9ನೇ ಅಧಿಕ ಸಿವಿಲ್ ಜಡ್ಜ್ ಮತ್ತು 10ನೇ ಜೆ.ಎಂ.ಎಫ್.ಸಿ.,
ತುಮಕೂರು.